# ಕ.ವಿ.ಪ್ರ.ನಿ.ನಿ. ಮತ್ತು ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್

# KPTCL AND ESCOMs PENSION AND GRATUITY TRUSTS

Ph No. 080-22291150
Fax No. 080-22223558
E-mail: pgtrustkptcl@gmail.com

75 ಸ್ವಾತಂತ್ರ್ಯದ ಅಮೃತಮಹೋತ್ಸವ

6th Floor,
Kaveri Bh avan,
Bangalore-560009.


ಸಂಖ್ಯೆ. ಕೆಇಪಿಜಿಟಿ/ಕೆಸಿಒ123/ಪಿ19/2023-24/ಸಿವೈಎಸ್-02 ದಿನಾಂಕ 17 MAY 2023

## ಸುತ್ತೋಲೆ

ವಿಷಯ: ದಿನಾಂಕ: 01.04.2022ರಿಂದ 31.03.2023ರ ಅವಧಿಯ ಪಿಂಚಣಿ/ಕುಟುಂಬ ಪಿಂಚಣಿ ಬಾಕಿ ಮೊತ್ತವನ್ನು ನಾಲ್ಕು ಕಂತುಗಳಲ್ಲಿ ಪಾವತಿಸಲು ಪ್ರತಿ ಮಾಹೆ ನಿಧಿ ಕೋರುವ ಕುರಿತು.

ಉಲ್ಲೇಖ:
1. ನಿಗಮದ ಆದೇಶ ಸಂಖ್ಯೆ. ಕವಿಪ್ರನಿನಿ/ಬಿ16/33359/2022-23 ದಿನಾಂಕ: 28.03.2023.
2. ಈ ಕಛೇರಿ ಸುತ್ತೋಲೆ ಸಂಖ್ಯೆ. ಕೆಇಪಿಜಿಟಿ/ಕೆಸಿಒ123/ಪಿ19/2023-24/ಸಿವೈಎಸ್-01 ದಿನಾಂಕ: 11.04.2023.
3. ನಿಗಮದ ಆದೇಶ ಸಂಖ್ಯೆ. ಕವಿಪ್ರನಿನಿ/ಬಿ16/33357(2)/2022-23 ದಿನಾಂಕ: 15.05.2023.

***********

ಉಲ್ಲೇಖ-2ರ ಸುತ್ತೋಲೆಯಲ್ಲಿ, ದಿನಾಂಕ 31.03.2022ರಲ್ಲಿದ್ದಂತೆ ಪಿಂಚಣಿ/ಕುಟುಂಬ ಪಿಂಚಣಿದಾರರ ಪಿಂಚಣಿ/ ಕುಟುಂಬ ಪಿಂಚಣಿಯನ್ನು ಹಾಗೂ ದಿನಾಂಕ 01.04.2017 ರಿಂದ 31.03.2022ರ ಅವಧಿಯಲ್ಲಿ ನಿವೃತ್ತಿಯಾದ/ ಸೇವೆಯಲ್ಲಿರುವಾಗಲೇ ನಿಧನರಾದ ಮತ್ತು ದಿನಾಂಕ 01.04.2022ರ ನಂತರ ನಿವೃತ್ತಿಯಾಗಿರುವ/ ನಿವೃತ್ತಿಯಾಗುತ್ತಿರುವ/ನಿವೃತ್ತಿ ನಂತರ ನಿಧನರಾಗುವ/ಸೇವೆಯಲ್ಲಿರುವಾಗಲೇ ನಿಧನರಾಗುವ ಸಿಬ್ಬಂದಿಗಳ ನಿವೃತ್ತಿ ಸೌಲಭ್ಯಗಳನ್ನು ಪರಿಷ್ಕರಿಸುವ ಸಂದರ್ಭದಲ್ಲಿ ಅನುಸರಿಸಬೇಕಾದ ಅಂಶಗಳನ್ನು ತಿಳಿಸಲಾಗಿರುತ್ತದೆ.

ಉಲ್ಲೇಖ-3ರ ಆದೇಶದಲ್ಲಿ ದಿನಾಂಕ 01.04.2022ರಿಂದ ಅನ್ವಯವಾಗುವಂತೆ ನಿವೃತ್ತರಾಗಿರುವ ನಿಗಮದ ನೌಕರರು ಹಾಗೂ ಅಧಿಕಾರಿಗಳ ಪಿಂಚಣಿ/ಕುಟುಂಬ ಪಿಂಚಣಿಯನ್ನು ಪರಿಷ್ಕರಿಸಿದ ಪರಿಣಾಮ ದಿನಾಂಕ 01.04.2022 ರಿಂದ 31.03.2023ರ ಅವಧಿಯ ಪಿಂಚಣಿ/ಕುಟುಂಬ ಪಿಂಚಣಿಯ ಬಾಕಿ ಮೊತ್ತವನ್ನು ನಿವೃತ್ತರಾಗಿರುವ ನೌಕರರು/ಅಧಿಕಾರಿಗಳಿಗೆ ಹಾಗೂ ಈ ಅವಧಿಯಲ್ಲಿ ಸೇವೆಯಲ್ಲಿದ್ದು ಮರಣಹೊಂದಿರುವ ನೌಕರರು/ಅಧಿಕಾರಿಗಳ ಅವಲಂಬಿತರಿಗೆ ಮೇ-2023ರಿಂದ ಪ್ರಾರಂಭಿಸಿ ಈ ಕೆಳಕಂಡಂತೆ ನಾಲ್ಕು ಕಂತುಗಳಲ್ಲಿ ನಗದಾಗಿ ಪಾವತಿಸಲು ನಿಗಮವು ಅನುಮೋದಿಸಿದೆ.

| ಅವಧಿ | ಪಾವತಿಸಬೇಕಾದ ತಿಂಗಳು |
|---|---|
| ದಿನಾಂಕ; **01.04.2022** ರಿಂದ **30.06.2022** ರ ಅವಧಿಯ ಪರಿಷ್ಕೃತ ಪಿಂಚಣಿ/ಕುಟುಂಬ ಪಿಂಚಣಿಯ ಬಾಕಿ ಮೊತ್ತ. | ಮೊದಲನೇ ಕಂತು ಮೇ-2023 |
| ದಿನಾಂಕ; **01.07.2022** ರಿಂದ **30.09.2022** ರ ಅವಧಿಯ ಪರಿಷ್ಕೃತ ಪಿಂಚಣಿ/ಕುಟುಂಬ ಪಿಂಚಣಿಯ ಬಾಕಿ ಮೊತ್ತ. | ಎರಡನೇ ಕಂತು ಜೂನ್-2023 |
| ದಿನಾಂಕ; **01.10.2022** ರಿಂದ **31.12.2022** ರ ಅವಧಿಯ ಪರಿಷ್ಕೃತ ಪಿಂಚಣಿ/ಕುಟುಂಬ ಪಿಂಚಣಿಯ ಬಾಕಿ ಮೊತ್ತ. | ಮೂರನೇ ಕಂತು ಜುಲೈ-2023 |
| ದಿನಾಂಕ; **01.01.2023** ರಿಂದ **31.03.2023** ರ ಅವಧಿಯ ಪರಿಷ್ಕೃತ ಪಿಂಚಣಿ/ಕುಟುಂಬ ಪಿಂಚಣಿಯ ಬಾಕಿ ಮೊತ್ತ. | ನಾಲ್ಕನೇ ಕಂತು ಆಗಸ್ಟ್ -2023 |

ಮೇಲಿನ ಹಿನ್ನೆಲೆಯಲ್ಲಿ, ಪಿಂಚಣಿ ಬಾಕಿಯನ್ನು Pension Payment Managmenet Systems ತಂತ್ರಾಂಶದಲ್ಲಿ ಲೆಕ್ಕಾಚಾರ ಮಾಡಲು ವ್ಯವಸ್ಥೆ ಇಲ್ಲದಿರುವುದರಿಂದ, ಪಿಂಚಣಿ ಬಟವಾಡೆ ಲೆಕ್ಕಘಟಕಗಳೇ ತಮ್ಮ ಮಟ್ಟದಲ್ಲಿ ಸೂಕ್ತ ಲೆಕ್ಕಾಚಾರಕ್ಕೆ ವ್ಯವಸ್ಥೆ ಮಾಡಿಕೊಳ್ಳುವುದು. ಈ ರೀತಿ ಲೆಕ್ಕಾಚಾರ ಮಾಡಿದ ಪಿಂಚಣಿ ವ್ಯತ್ಯಾಸ ಬಾಕಿಯ ಕಂತಿನ ಮೊತ್ತವನ್ನು ಆಂತರಿಕ ಪರಿಶೋಧನೆಗೆ ಒಳಪಡಿಸಿ,

https://kptcl.karnataka.gov.in/english>e-prasarana>online software>Pension Payment Managmenet Systems>Pension Arrears Bill ದಲ್ಲಿ ಷರಾ ಕಾಲಂನಲ್ಲಿಯೂ ವಿವರಗಳೊಂದಿಗೆ ದಾಖಲು ಮಾಡಿ ಪಿಂಚಣಿ ವ್ಯತ್ಯಾಸ ಬಿಲ್ಲನ್ನು ಪಿಪಿಎಂಎಸ್ ತಂತ್ರಾಂಶದಿಂದಲೇ ಕಡ್ಡಾಯವಾಗಿ ಜನಿತ(Generate) ಮಾಡುವುದು.

ದಿನಾಂಕ 01.04.2022 ರಿಂದ 31.03.2023ರ ಅವಧಿಯಲ್ಲಿ ನಿವೃತ್ತಿಯಾಗಿರುವ/ನಿವೃತ್ತಿ ನಂತರ ನಿಧನರಾಗಿರುವ /ಸೇವೆಯಲ್ಲಿರುವಾಗಲೇ ನಿಧನರಾಗಿರುವ ಸಿಬ್ಬಂದಿಗಳ ನಿವೃತ್ತಿ ಸೌಲಭ್ಯ ಪರಿಷ್ಕರಣೆಯು ಸಕ್ಷಮ ಪಿಂಚಣಿ ಅಧೀಕರಿಸುವ ಪ್ರಾಧಿಕಾರವು (ಕವಿಪ್ರನಿನಿ/ವಿಸಕಂಗಳ ಆರ್ಥಿಕ ಸಲಹೆಗಾರರು) ಪಿಂಚಣಿ ಅಧೀಕರಿಸಿದ ತರುವಾಯವಷ್ಟೇ ಪಿಂಚಣಿ ಬಾಕಿ ಮೊತ್ತವನ್ನು ಪಾವತಿಸಲು ಕ್ರಮ ಕೈಗೊಳ್ಳುವುದು.

ನಿಧನಗೊಂಡ ನಿವೃತ್ತಿದಾರರು/ಕುಟುಂಬ ಪಿಂಚಣಿದಾರರ ಅರ್ಹ ಅವಲಂಬಿತರು/ವಾರಸುದಾರರಿಗೆ ಅವರ ನೈಜತೆಯನ್ನು ನಿಯಮಾನುಸಾರ ದೃಢೀಕರಿಸಿಕೊಂಡು ಪಿಂಚಣಿ/ಕುಟುಂಬ ಪಿಂಚಣಿ ಬಾಕಿ ಮೊತ್ತವನ್ನು ಪಾವತಿಸಬಹುದಾಗಿದೆ.

ಮುಂದುವರೆದು, ಮೇ-2023 ರಿಂದ ಪ್ರಾರಂಭಿಸಿ ಪಿಂಚಣಿ ಬಾಕಿ ಮೊತ್ತವನ್ನು ನಮೂನೆ-1ರಲ್ಲಿ ನಮೂದಿಸಿ, Pension Payment Managmenet Systems ತಂತ್ರಾಂಶದಿಂದ ಜನಿತಗೊಂಡ ಮಾಸಿಕ ನಮೂನೆ-2 & 2A ಜೊತೆಗೆ ಹಿಂದಿನ ತಿಂಗಳ ಬ್ಯಾಂಕ್ ಸಮನ್ವಯ ಪಟ್ಟಿಯನ್ನು ಲಗತ್ತಿಸಿ ಪ್ರತಿ ಮಾಹೆಯ 20ನೇ ದಿನಾಂಕದೊಳಗೆ ಹಾರ್ಡ್ ಮತ್ತು ಸಾಫ್ಟ್ ಪ್ರತಿಯಲ್ಲಿ ಟ್ರಸ್ಟ್ ಕಛೇರಿಗೆ ಕಡ್ಡಾಯವಾಗಿ ಸಲ್ಲಿಕೆಯಾಗುವುದನ್ನು ಖಚಿತಪಡಿಸಿಕೊಳ್ಳುವುದು. ನಿಗದಿತ ದಿನಾಂಕದೊಳಗೆ ಪಿಂಚಣಿ ನಿಧಿ ಕೋರಿಕೆಯು ಟ್ರಸ್ಟ್‌ಗೆ ಸಲ್ಲಿಕೆಯಾಗದಿದ್ದ ಪಕ್ಷದಲ್ಲಿ ಮುಂದಿನ ಪರಿಣಾಮಗಳಿಗೆ ಪಿಂಚಣಿ ಬಟವಾಡೆ ಅಧಿಕಾರಿಗಳೇ ನೇರ ಹೊಣೆಗಾರರಾಗುತ್ತಾರೆಂದು ತಿಳಿಯಪಡಿಸಲಾಗಿದೆ.

ನಿರ್ದೇಶಕರು(ಹಣಕಾಸು),
ಕವಿಪ್ರನಿನಿ ಮತ್ತು ಅಧ್ಯಕ್ಷರು (ಪಿಂ & ಉ ಟ್ರಸ್ಟ್)ರವರಿಂದ ಅನುಮೋದಿಸಲ್ಪಟ್ಟಿದೆ.

B. Mahalakshmi 17/5/23
ಆರ್ಥಿಕ ಸಲಹೆಗಾರರು ಮತ್ತು ವ್ಯವಸ್ಥಾಪಕ ಟ್ರಸ್ಟಿ,
ಕವಿಪ್ರನಿನಿ/ವಿಸಕಂಗಳ ಪಿಂಚಣಿ & ಉಪದಾನ ಟ್ರಸ್ಟ್.

ಪ್ರತಿ ಮಾಹಿತಿಗಾಗಿ:

1. ಆರ್ಥಿಕ ಸಲಹೆಗಾರರು(ಲೆ & ಸಂ), ಕವಿಪ್ರನಿನಿ, ಕಾವೇರಿ ಭವನ.
2. ಮುಖ್ಯ ಪ್ರಧಾನ ವ್ಯವಸ್ಥಾಪಕರು(ಹ & ವಾ), ಬೆವಿಕಂ, ಕೆ.ಆರ್.ವೃತ್ತ, ಬೆಂಗಳೂರು.
3. ಮುಖ್ಯ ಆರ್ಥಿಕ ಅಧಿಕಾರಿ, ಚಾವಿಸನಿ/ಗುವಿಕಂ/ಹುವಿಕಂ/ಮವಿಕಂ.

ಪ್ರತಿ ಸೂಕ್ತ ಕ್ರಮಕ್ಕಾಗಿ:

4. ಅಧೀಕ್ಷಕ ಇಂಜಿನಿಯರ್(ವಿ), ಮಾಹಿತಿ ತಂತ್ರಜ್ಞಾನ, ಗಣಕಯಂತ್ರ ಶಾಖೆ, ಕಾವೇರಿ ಭವನ, ಬೆಂಗಳೂರು-09 ಕೆಇಪಿಜಿಟಿ ವೆಬ್ ತಾಣದಲ್ಲಿ ಪ್ರಕಟಿಸಲು ಕೋರಲಾಗಿದೆ.
5. ಎಲ್ಲಾ ಲೆಕ್ಕಾಧಿಕಾರಿಗಳು, ಕಾರ್ಯ ಮತ್ತು ಪಾಲನಾ ವಿಭಾಗ/ಆಂ.ಪ, ಬೆವಿಕಂ/ಚಾವಿಸನಿ/ಗುವಿಕಂ/ಹುವಿಕಂ/ಮವಿಕಂ.
6. ಲೆಕ್ಕಾಧಿಕಾರಿಗಳು, ಕವಿಪ್ರನಿನಿ, ಎಂ.ಆರ್.ಎಸ್.ಶಿವಮೊಗ್ಗ.